## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1327

ಸದಸ್ಯರ ಹೆಸರು : ಶ್ರೀ ಪಿ.ಆರ್ ರಮೇಶ್ (ನಾಮ ನಿರ್ದೇಶನ ಹೊಂದಿದವರು)

ಉತ್ತರಿಸಬೇಕಾದ ದಿನಾಂಕ : 08.03.2022

ಉತ್ತರಿಸುವವರು : ಗಣಿ ಮತ್ತು ಭೂವಿಜ್ಞಾನ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರೀಕರ ಸಬಲೀಕರಣ ಸಚಿವರು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಗಣಿ ಮತ್ತು ಭೂವಿಜ್ಞಾನ ಇಲಾಖೆಯಲ್ಲಿ ಜಾರಿಯಲ್ಲಿರುವ ಯೋಜನಗಳು ಯಾವುವು; (ವಿವರ ನೀಡುವುದು) | ಗಣಿ ಮತ್ತು ಭೂವಿಜ್ಞಾನ ಇಲಾಖೆಯಲ್ಲಿ 2021-22ನೇ ಸಾಲಿನಲ್ಲಿ ಸರ್ಕಾರದ ಅನುಮೋದಿತ ಕ್ರಿಯಾ ಯೋಜನೆಯಂತೆ ಈ ಕೆಳಕಂಡ 05 ಯೋಜನೆಗಳು ಜಾರಿಯಲ್ಲಿರುತ್ತವೆ.<br>1. ಅಧಿಕಾರಿ ಮತ್ತು ಸಿಬ್ಬಂದಿ ವರ್ಗಕ್ಕೆ ತರಬೇತಿ ಯೋಜನೆ.<br>2. ಖನಿಜಾನ್ವೇಷಣೆ ಮತ್ತು ಪರಿಸರ ಭೂವಿಜ್ಞಾನ ಯೋಜನೆ.<br>3. ಕಲ್ಲು ಗಣಿ ಗುತ್ತಿಗೆ ಪ್ರದೇಶದಲ್ಲಿ ಗುಂಡಿ ಮುಚ್ಚುವ ಯೋಜನೆ.<br>4. ಆಧುನೀಕರಣ.<br>5. ಬಂಡವಾಳ ವೆಚ್ಚ – ಕಛೇರಿ ಕಟ್ಟಡಗಳ ನಿರ್ಮಾಣ.<br>2021-22ನೇ ಸಾಲಿನಲ್ಲಿ ಈ 05 ಯೋಜನೆಗಳ ಅಡಿಯಲ್ಲಿ ಸರ್ಕಾರದಿಂದ ಅನುಮೋದನೆಗೊಂಡಿರುವ ಕ್ರಿಯಾ ಯೋಜನೆಯಂತೆ ಜಾರಿಗೊಳಿಸುತ್ತಿರುವ ಕಾರ್ಯಕ್ರಮಗಳ ವಿವರವನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ. |
| ಆ) | ಪ್ರಸ್ತುತ ಅಥವಾ ಮುಂಬರುವ ವರ್ಷಗಳಲ್ಲಿ ಪರಿಸರ-ಸ್ನೇಹಿ ಗಣಿಗಾರಿಕೆ ಪ್ರೋತ್ಸಾಹಿಸುವ ಯಾವುದಾದರು ನೂತನ ಯೋಜನೆ ಜಾರಿಗೊಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ? (ವಿವರ ನೀಡುವುದು) | ಖನಿಜ ರಿಯಾಯಿತಿ ನಿಯಮಾವಳಿ 2016 ರ ನಿಯಮ 13 ರಂತೆ ಗಣಿಗುತ್ತಿಗೆದಾರರು ಕಡ್ಡಾಯವಾಗಿ ಭಾರತ ಸರ್ಕಾರದ ಇಂಡಿಯನ್ ಬ್ಯೂರೋ ಆಫ್ ಮೈನ್ಸ್ ಸಂಸ್ಥೆಯಿಂದ ಅನುಮೋದಿಸಲ್ಪಟ್ಟ ಮೈನಿಂಗ್ ಪ್ಲಾನ್ ಅನ್ವಯ ಗಣಿಗಾರಿಕೆಯನ್ನು ನಡೆಸಬೇಕಾಗಿರುತ್ತದೆ. ಪರಿಸರಕ್ಕಾಗುವ ಹಾನಿಯನ್ನು ಕನಿಷ್ಠಗೊಳಿಸುವ ನಿಟ್ಟಿನಲ್ಲಿ ನಿರ್ದಿಷ್ಟ ಪಡಿಸಿದ ಕ್ರಮಗಳನ್ನು ಅನುಷ್ಠಾನಗೊಳಿಸದ ಪಕ್ಷದಲ್ಲಿ ಗಣಿಗಾರಿಕೆಯನ್ನು ಅಮಾನತ್ತಿನಲ್ಲಿಡುವ ಅಧಿಕಾರವನ್ನು ಸದರಿ ಸಂಸ್ಥೆಯು ಹೊಂದಿರುತ್ತದೆ. ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶ ದಿನಾಂಕ:05.08.2021 ರಲ್ಲಿ ಕಬ್ಬಿಣದ ಅದಿರಿನ ಗಣಿ ಗುತ್ತಿಗೆಗಳಿಗೆ ಸಂಬಂಧಿಸಿದಂತೆ ಪರಿಸರ ಪುನಶ್ಚೇತನ ಮತ್ತು ಪುನರುಜ್ಜೀವನ ಕಾರ್ಯವನ್ನು ಕಡ್ಡಾಯಗೊಳಿಸಿ ಅನುಷ್ಠಾನಗೊಳಿಸಲು ಆದೇಶಿಸಿರುತ್ತದೆ.<br>ಅದರಂತೆ, ಸಮಗ್ರ ಆರ್ & ಆರ್ ಯೋಜನೆಯನ್ನು ಸಿದ್ಧಪಡಿಸಲು ಡೆಹರಾಡೂನಿನ ಐ.ಸಿ.ಎಫ್.ಆರ್.ಇ ಸಂಸ್ಥೆಗೆ ವಹಿಸಿದ್ದು, ಸದರಿ ಸಂಸ್ಥೆಯು ತಯಾರಿಸಿದ ಆರ್ & ಆರ್ ಯೋಜನೆಯನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸಿದ ನಂತರವೇ ಗಣಿಗಾರಿಕೆಗೆ ಅನುಮತಿ ನೀಡಲಾಗುತ್ತಿರುತ್ತದೆ<br>ಮಾನ್ಯ ಸರ್ವೋಚ್ಚ ನ್ಯಾಯಾಲಯದ ಎಸ್.ಎಲ್.ಪಿ. ಸಂಖ್ಯೆ 19628-19629/2009, ದಿನಾಂಕ:27.02.2012ರ (ದೀಪಕ್ ಕುಮಾರ್ V/s. ಹರಿಯಾಣ ರಾಜ್ಯ) ಆದೇಶದಲ್ಲಿ ಕಲ್ಲು ಗಣಿ ಗುತ್ತಿಗೆ ಮಂಜೂರು ಮಾಡಲು ಪರಿಸರ ಅನುಮತಿ ಪತ್ರ ಕಡ್ಡಾಯಗೊಳಿಸಿದೆ. ಪರಿಸರ ಅನುಮತಿ ಪತ್ರ ಪಡೆಯಲು |

| | | |
|---|---|---|
| | | ಅನುಮೋದಿತ ಕ್ವಾರಿಯಿಂಗ್ ಪ್ಲಾನ್ ಮತ್ತು ಮೈನ್ ಕ್ಲೋಷರ್ ಪ್ಲಾನ್ ಅವಶ್ಯವಿರುತ್ತದೆ.<br>ಅದರಂತೆ, ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 8(1-A)ರ ಪ್ರಕಾರ ಪರಿಸರ ಇಲಾಖೆಯಿಂದ ಪರಿಸರ ಅನುಮತಿ ಪತ್ರ ಸಲ್ಲಿಸಿದ ನಂತರವೇ ಕಲ್ಲು ಗಣಿ ಗುತ್ತಿಗೆ ಮಂಜೂರಾತಿಗೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.<br>ಗುತ್ತಿಗೆದಾರರಿಗೆ ಕಲ್ಲು ಗಣಿ ಗುತ್ತಿಗೆ ಪ್ರದೇಶದಲ್ಲಿ ಅನುಮೋದಿತ ಕ್ವಾರಿಯಿಂಗ್ ಪ್ಲಾನ್ ಪ್ರಕಾರ ಹಾಗೂ ನಿಯಮ 8(U) ರ ಪ್ರಕಾರ ಪರಿಸರಕ್ಕೆ ಹಾನಿಯಾಗದಂತೆ ಗಣಿಗಾರಿಕೆ ನಡೆಸಲು ಗುತ್ತಿಗೆದಾರರಿಗೆ ತಿಳುವಳಿಕೆ ನೀಡಲಾಗುತ್ತಿದೆ. ಹಾಗೆಯೇ, ಉಪ ಖನಿಜ ಗುತ್ತಿಗೆ/ಪರವಾನಿಗೆ ಪ್ರದೇಶಗಳಲ್ಲಿ ಪರಿಸರದ ಪುನಶ್ಚೇತನ ಮತ್ತು ಪುನರುಜ್ಜೀವನಕ್ಕಾಗಿ ನಿಯಮ 8-Q ಅನ್ವಯ ಕಲ್ಲು ಗಣಿ ಗುತ್ತಿಗೆದಾರರು ಮತ್ತು ಸಮೂಹ ಕಲ್ಲು ಗಣಿ ಗುತ್ತಿಗೆದಾರರು ಪರಿಸರ ನಿರ್ವಹಣಾ ಯೋಜನೆ ಹಾಗೂ ಸಾಮೂಹಿಕ ಪರಿಸರ ನಿರ್ವಹಣಾ ಯೋಜನೆಯನ್ನು ತಯಾರಿಸಿ ರಾಜ್ಯ ಪರಿಸರ ಆಘಾತ ಅಂದಾಜೀಕರಣ ಪ್ರಾಧಿಕಾರದ ಅನುಮೋದನೆ ಪಡೆದು ಅನುಷ್ಠಾನಗೊಳಿಸುವುದನ್ನು ಕಡ್ಡಾಯಗೊಳಿಸಲಾಗಿದೆ.<br>ಮುಂದುವರೆದು, ಪರಿಸರ-ಸ್ನೇಹಿ ಗಣಿಗಾರಿಕೆ ಪ್ರೋತ್ಸಾಹಿಸುವ ಸಲುವಾಗಿ 2022-23ನೇ ಸಾಲಿನಲ್ಲಿ ಇಲಾಖೆ ವತಿಯಿಂದ ಗಣಿ ತ್ಯಾಜ್ಯ ಮರುಬಳಕೆ, ಸ್ಫೋಟಕ ತೀವ್ರತೆಯ ಪರಿಣಾಮಗಳನ್ನು ಕಡಿಮೆಗೊಳಿಸುವ ಉಪಕ್ರಮಗಳು, ನೈಸರ್ಗಿಕ ಖನಿಜಗಳಿಗೆ ಪರ್ಯಾಯ ವಸ್ತುಗಳು ಮತ್ತು ತಂತ್ರಜ್ಞಾನ/ಉಪಕರಣಗಳ ಬಳಕೆ ಬಗ್ಗೆ ಹೆಸರಾಂತ ಸಂಸ್ಥೆಗಳ ಸಹಯೋಗದಲ್ಲಿ ಅಧ್ಯಯನ ಕಾರ್ಯಕ್ರಮಗಳನ್ನು ಕೈಗೊಳ್ಳಲು ಉದ್ದೇಶಿಸಲಾಗಿದೆ. |

ಸಂಖ್ಯೆ: ಸಿಐ **46** ಎಂಜಿಎಸ್ **2022**

Halappa B.

(ಆಚಾರ್ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂವಿಜ್ಞಾನ ಮತ್ತು ಮಹಿಳಾ
ಮತ್ತು
ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರೀಕರ ಸಬಲೀಕರಣ
ಸಚಿವರು

ಅನುಬಂಧ - 01

ಕರ್ನಾಟಕ ಸರ್ಕಾರದ ನಡವಳಿಗಳು

ಆಪ್ತ ಶಾಖೆ
ಸಂ: 3108 ದಿ 3/7/21

ವಿಷಯ: ಗಣಿ ಮತ್ತು ಭೂವಿಜ್ಞಾನ ಇಲಾಖೆಯ 2021-22 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಗೆ ಅನುಮೋದನೆ ನೀಡುವ ಕುರಿತು.

ಓದಲಾಗಿದೆ: 1. ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ ಇವರ ಪತ್ರ ಸಂಖ್ಯೆ:ಗಭೂಇ/ಯೋಜನೆ/72804-III/2021-22 ದಿ: 08-04-2021

2. ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ ಇವರ ಪತ್ರ ಸಂಖ್ಯೆ: ಗಭೂಇ/ಯೋಜನೆ/72804-III/2021-22/236 ದಿನಾಂಕ: 18-06-2021

ನಿರ್ದೇಶಕರ ಕಛೇರಿ
ಗಣಿ ಮತ್ತು ಭೂ ವಿಜ್ಞಾನ ಇಲಾಖೆ
Office of the Director
Dept. of Mines & Geology
425 29 JUN 2021
26749/6
Bengaluru - 560001.

*****

ಪ್ರಸ್ತಾವನೆ:

ಮೇಲೆ ಓದಲಾದ (1) ಮತ್ತು (2) ರ ಪತ್ರಗಳಲ್ಲಿ 2021-22 ಸಾಲಿನ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಮುಂದುವರೆದ ಯೋಜನೆಗಳ ಅನುದಾನದ ಸಮರ್ಪಕ ಬಳಕೆಗೆ ಯೋಜನೆ/ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಸಿದ್ಧಪಡಿಸಲಾದ ವಾರ್ಷಿಕ ಕ್ರಿಯಾ ಯೋಜನೆಗಳಿಗೆ ಅನುಮೋದನೆ ನೀಡುವಂತೆ ಕೋರಿ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ ಇವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

DD PM
SU plan

ಪ್ರಸ್ತಾವನೆಯನ್ನು ನಿಯಮಾನುಸಾರ ಕೂಲಂಕಷವಾಗಿ ಪರಿಶೀಲಿಸಿದ ನಂತರ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಬೆಂಗಳೂರು ಇವರು ಸಲ್ಲಿಸಿರುವ 2021-22ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಗೆ ಅನುಮೋದನೆ ನೀಡಲು ತೀರ್ಮಾನಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಸಿಐ 17 ಎಂಜಿಎಸ್ 2021**

**ಬೆಂಗಳೂರು, ದಿನಾಂಕ: 28-06-2021**

DD (plan)

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ 2021-22ನೇ ಸಾಲಿಗೆ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ಕೆಳಕಂಡ ವಿವಿಧ ಕಾರ್ಯಕ್ರಮಗಳನ್ನೊಳಗೊಂಡ ವಾರ್ಷಿಕ ಕ್ರಿಯಾ ಯೋಜನೆಗೆ ಆಯವ್ಯಯ ಲೆಕ್ಕಶೀರ್ಷಿಕೆಯಡಿ ಒದಗಿಸಿರುವ ಅನುದಾನಕ್ಕೆ ಸೀಮಿತಗೊಳಿಸಿ ಈ ಆದೇಶದ ಅನುಬಂಧದಲ್ಲಿ ನಮೂದಿಸಿರುವ ವಾರ್ಷಿಕ ಕಾರ್ಯಕ್ರಮವಾರು ಕ್ರಿಯಾ ಯೋಜನೆಯ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಅನುಷ್ಠಾನಗೊಳಿಸಲು ಸರ್ಕಾರದ ಅನುಮೋದನೆ ನೀಡಲಾಗಿದೆ.

| ಕ್ರ ಸಂ. | ಯೋಜನೆಯ ಹೆಸರು | ಲೆಕ್ಕ ಶೀರ್ಷಿಕೆ ಸಂಖ್ಯೆ | ಒದಗಿಸಲಾಗಿರುವ ಅನುದಾನದ ಮೊತ್ತ (ರೂ. ಲಕ್ಷಗಳಲ್ಲಿ) |
|---|---|---|---|
| 1 | ಅಧಿಕಾರಿ ಮತ್ತು ಸಿಬ್ಬಂದಿ ವರ್ಗಕ್ಕೆ ತರಬೇತಿ | 2853-02-102-0-10 ಉಪ ಶೀರ್ಷಿಕೆ 015 | 25.00 |
| 2 | ಖನಿಜಾನ್ವೇಷಣೆ ಮತ್ತು ಪರಿಸರ, ಭೂವೈಜ್ಞಾನಿಕ ಶಾಖೆ | 2853-02-102-0-15 ಉಪ ಶೀರ್ಷಿಕೆ 059 | 4000.00 |
| 3 | ಕಲ್ಲುಗಣಿ ಗುತ್ತಿಗೆ ಪ್ರದೇಶದಲ್ಲಿ ಗುಂಡಿ ಮುಚ್ಚುವುದು | 2853-02-102-0-17 | 200.00 |
| 4 | ಆಧುನೀಕರಣ | 2853-02-001-0-01 ಉಪ ಶೀರ್ಷಿಕೆ 125 | 500.00 |
| 5 | ಬಂಡವಾಳ ವೆಚ್ಚ ಕಛೇರಿ ಕಟ್ಟಡಗಳ ನಿರ್ಮಾಣ | 4852-01-800-0-01 | 430.00 |
| | | ಒಟ್ಟು | 5155.00 |

..2

ಈ ಆದೇಶದಲ್ಲಿ ನಿಗಧಿಪಡಿಸಿರುವ ಕಾಮಗಾರಿಗಳ ಪ್ರಗತಿ ವರದಿಯನ್ನು ಪ್ರತಿ ತಿಂಗಳು ಜರುಗಲಿರುವ ಎಂಪಿಕ್(MPIC) ಸಭೆಗೆ ಒಂದು ವಾರದ ಮುಂಚಿತವಾಗಿ ಈ ಇಲಾಖೆಗೆ ಹಾಗೂ ಯೋಜನಾ ಇಲಾಖೆಗೆ ಕಡ್ಡಾಯವಾಗಿ ಸಲ್ಲಿಸತಕ್ಕದ್ದು.

ಈ ಆದೇಶದ ಅನುಬಂಧದಲ್ಲಿನ ಕ್ರಮ ಸಂಖ್ಯೆ 02 ರ ಖನಿಜಾನ್ವೇಷಣೆ ಮತ್ತು ಪರಿಸರ ಭೂವೈಜ್ಞಾನಿಕ ಶಾಖೆಗೆ ಸಂಬಂಧಿಸಿದ ಕಂಡಿಕೆ-03, 04 ಮತ್ತು 05ಕ್ಕೆ ಸಂಬಂಧಿಸಿದಂತೆ ಆರ್ಥಿಕ ಇಲಾಖೆಯ ಅನುಮೋದನೆಗೆ ಒಳಪಟ್ಟು ಅನುಷ್ಠಾನಗೊಳಿಸಲು ಸೂಚಿಸಲಾಗಿದೆ.

ಸದರಿ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ಕಾಯ್ದೆ, 1999 ಹಾಗೂ ನಿಯಮ 2000 ಗಳನ್ನು ಕಡ್ಡಾಯವಾಗಿ ಅನುಸರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ 65 (ಟಿ) ವೆಚ್ಚ-1 /2020 ದಿನಾಂಕ: 06-04-2021 ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

28/6/2021
(ಸುಮ ಎಸ್)
ಸರ್ಕಾರದ ಅಧೀನ ಕಾರ್ಯದರ್ಶಿ (ಗಣಿ-1),
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.

ಇವರಿಗೆ,

1. ಮಹಾಲೇಖಪಾಲರು(ಲೆಕ್ಕ ಪತ್ರ ಮತ್ತು ಹಕ್ಕುಗಳು), ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ (ಆಯವ್ಯಯ & ಸಂಪನ್ಮೂಲ) ಆರ್ಥಿಕ ಇಲಾಖೆ, ವಿಧಾನಸೌಧ.
3. ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಖನಿಜ ಭವನ, ಬೆಂಗಳೂರು.
4. ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಕೆ.ಆರ್.ವೃತ್ತ, ಬೆಂಗಳೂರು.
5. ಸರ್ಕಾರದ ಅಧೀನ ಕಾರ್ಯದರ್ಶಿ(ವೆಚ್ಚ 1 & ಬಂ.ಹೂಡಿಕೆ), ಆರ್ಥಿಕ ಇಲಾಖೆ, ವಿಧಾನಸೌಧ.
6. ಸರ್ಕಾರದ ಕಾರ್ಯದರ್ಶಿ(ಎಂಎಸ್ಎಂಇ & ಗಣಿ)ರವರ ಆಪ್ತ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.
7. ಸರ್ಕಾರದ ಜಂಟಿ ಕಾರ್ಯದರ್ಶಿಗಣಿ) ರವರ ಆಪ್ತ ಸಹಾಯಕರು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.
8. ಆಂತರಿಕ ಆರ್ಥಿಕ ಸಲಹೆಗಾರರ ಆಪ್ತ ಸಹಾಯಕರು, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.
9. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

ಅನುಬಂಧ

## ಗಣಿ ಮತ್ತು ಭೂವಿಜ್ಞಾನ ಇಲಾಖೆ

## 2021-22ನೇ ಸಾಲಿನ ಮುಂದುವರೆದ ಯೋಜನೆಗಳ ವಾರ್ಷಿಕ ಕ್ರಿಯಾ ಯೋಜನೆ

(ರೂ.ಲಕ್ಷಗಳಲ್ಲಿ)

| ಕ್ರ. ಸಂ. | ಯೋಜನೆ ಮತ್ತು ಲೆಕ್ಕ ಶೀರ್ಷಿಕೆ ಸಂಖ್ಯೆ | ಕಾರ್ಯಕ್ರಮಗಳು | ಅಂದಾಜಿಸಲಾದ ಅನುದಾನ |
|---|---|---|---|
| 1 | ಅಧಿಕಾರಿ ಮತ್ತು ಸಿಬ್ಬಂದಿ ವರ್ಗಕ್ಕೆ ತರಬೇತಿ (2853-02-102-0-10) ಉಪ ಶೀರ್ಷಿಕೆ 015 | 1) ಇಲಾಖೆಯ ತಾಂತ್ರಿಕ ಅಧಿಕಾರಿಗಳು ಹಾಗೂ ಅಭಿಯಂತರರಿಗೆ ಡಿ.ಜಿ.ಪಿ.ಎಸ್, ಟೋಟಲ್ ಸ್ಟೇಷನ್, 3D ಸ್ಕ್ಯಾನರ್, ಡ್ರೋಣ್ ಉಪಕರಣಗಳ ಸರ್ವೆ ಡೇಟಾಗಳನ್ನು ಸಂಬಂಧಿಸಿದ ತಂತ್ರಾಂಶಗಳಲ್ಲಿ ಸಂಸ್ಕರಿಸುವ ಮತ್ತು ಸದರಿ ತಂತ್ರಾಂಶಗಳನ್ನು ಬಳಸುವ ಬಗ್ಗೆ ತರಬೇತಿ ಹಾಗೂ ಇತರೆ ಅವಶ್ಯ ತರಬೇತಿ ಕಾರ್ಯಕ್ರಮಗಳ ವೆಚ್ಚ. | 15.00 |
| | | 2) ಇಲಾಖೆಯ ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ ಕಾನೂನು, ಪೊಲೀಸ್ ಮತ್ತು ನ್ಯಾಯಾಲಯದ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ; ಮೈಸೂರಿನ ಭೂಸಮೀಕ್ಷಾ ತರಬೇತಿ ಸಂಸ್ಥೆಯಲ್ಲಿ ಭೂಸಮೀಕ್ಷೆ ಬಗ್ಗೆ; ಖನಿಜಾನ್ವೇಷಣೆಯಲ್ಲಿ ಭೂಮಿಯ ಒಳಭಾಗದಲ್ಲಿರುವ (subsurface) ಖನಿಜಗಳ ಗುರುತುಪಡಿಸಲು Geophysical survey ತರಬೇತಿ ಹಾಗೂ ಭೂವಿಜ್ಞಾನಕ್ಕೆ ಸಂಬಂಧಿಸಿದ ಹೆಸರಾಂತ ಸಂಘ ಸಂಸ್ಥೆಗಳು ನಡೆಸುವ ಸಮಾವೇಶ, ತರಬೇತಿ ಹಾಗೂ ಕಾರ್ಯಾಗಾರಗಳಿಗೆ ಭಾಗವಹಿಸಲು ನೋಂದಣಿ ಶುಲ್ಕ ಭರಿಸಲು, ದೇಶ-ವಿದೇಶಗಳಲ್ಲಿ ನಡೆಯುವ ಭೂವಿಜ್ಞಾನಕ್ಕೆ ಸಂಬಂಧಿಸಿದ ತರಬೇತಿ / ವಸ್ತು ಪ್ರದರ್ಶನದಲ್ಲಿ ಭಾಗವಹಿಸಲು ತಗಲುವ ವೆಚ್ಚ. | 3.00 |
| | | 3) ಕೇಂದ್ರ ಕಛೇರಿ ಹಾಗೂ ಎಲ್ಲಾ ಜಿಲ್ಲಾ ಕಛೇರಿಗಳಿಗೆ "Journals of Geological Society of India" ನಿಯತಕಾಲಿಕವನ್ನು ಒದಗಿಸಲು ಅದರ ವಾರ್ಷಿಕ ಚಂದಾದಾರತ್ವ ನವೀಕರಣ. | 3.00 |
| | | 4) ಭಾರತೀಯ ಭೂವೈಜ್ಞಾನಿಕ ಸಂಘವು ಹೊರತರುತ್ತಿರುವ "ಕರ್ನಾಟಕದ ಖನಿಜ ಸಂಪನ್ಮೂಲಗಳು" ಪುಸ್ತಕದ ನವೀನ ಆವೃತ್ತಿ ಹಾಗೂ ವಿವಿಧ ಸಂಘ-ಸಂಸ್ಥೆಗಳು ಹೊರತರುವ ಭೂವೈಜ್ಞಾನಿಕ ಪುಸ್ತಕಗಳ ಖರೀದಿ. | 0.50 |
| | | 5) ಇಲಾಖೆಯ ಹಳೆಯ ಭೂವೈಜ್ಞಾನಿಕ ಮತ್ತು ಖನಿಜಾನ್ವೇಷಣಾ ವರದಿಗಳು ಮತ್ತು ಹೊಸ ತಾಂತ್ರಿಕ ವರದಿಗಳ ಮುದ್ರಣ, ಆಡಳಿತ ವರದಿ ಮುದ್ರಣ ಹಾಗೂ ಅವಶ್ಯಕವಿರುವ ಖನಿಜ ನಿಯಮಗಳು ಮತ್ತು ಇತರೆ ಪುಸ್ತಕಗಳ ಮುದ್ರಣ ಮತ್ತು ಖರೀದಿ. | 3.50 |
| | | ಒಟ್ಟು | 25.00 |

| ಕ್ರ. ಸಂ. | ಯೋಜನೆ ಮತ್ತು ಲೆಕ್ಕ ಶೀರ್ಷಿಕೆ ಸಂಖ್ಯೆ | ಕಾರ್ಯಕ್ರಮಗಳು | ಅಂದಾಜಿಸಲಾದ ಅನುದಾನ |
|---|---|---|---|
| 2 | ಖನಿಜಾನ್ವೇಷಣೆ ಮತ್ತು ಪರಿಸರ ಭೂವೈಜ್ಞಾನಿಕ ಶಾಖೆ (2853-02-102-0-15) ಉಪ ಶೀರ್ಷಿಕೆ 059 | 1) 31.03.2020ಕ್ಕೆ ಗಣಿಗುತ್ತಿಗೆ ಅವಧಿ ಅಂತ್ಯವಾಗಿರುವ ಗಣಿಗುತ್ತಿಗೆಗಳ ಖನಿಜ ಅನ್ವೇಷಣೆ ಮತ್ತು ಹೊಸ ಬ್ಲಾಕ್ ಗಳನ್ನು ಗುರುತಿಸಿ ಅನ್ವೇಷಣಾ ಕಾರ್ಯ ಕೈಗೊಳ್ಳಲು ಹಾಗೂ ಹರಾಜು ಕಾರ್ಯ ಕೈಗೊಳ್ಳಲು ಅನುವಾಗುವಂತೆ MECL, KIOCL, GSI ಮತ್ತು ಇತರೆ ಸಂಸ್ಥೆಯ ವತಿಯಿಂದ ಖನಿಜ ನಿಕ್ಷೇಪಗಳ ಅನ್ವೇಷಣೆಯ ವೆಚ್ಚ, ಡಿ.ಜಿ.ಪಿ.ಎಸ್ ಸರ್ವೆ, ಗಡಿ ಸ್ತಂಭ ನಿರ್ಮಾಣ, ಎಮ್.ಎಸ್.ಟಿ.ಸಿ, CRISIL ಮತ್ತು ವಹಿವಾಟು ಸಲಹೆಗಾರರ ನೇಮಕಾತಿ/ಸಂಭಾವನೆ/ ಸೇವಾ ಶುಲ್ಕ ವೆಚ್ಚ. ಜೊತೆಗೆ ಇದೇ ವಿಷಯವಾಗಿ ಯಾವುದೇ ಸಕ್ಷಮ ಪ್ರಾಧಿಕಾರಗಳು/ ನ್ಯಾಯಾಲಯಗಳು ಹೊರಡಿಸುವ ಆದೇಶಗಳಂತೆ ಕಾಲಕಾಲಕ್ಕೆ ಮಾಡಬೇಕಾದ ಪಾವತಿಗಳ ವೆಚ್ಚ | 2525.00 |
| | | 2) 2020-21ನೇ ಸಾಲಿನಲ್ಲಿ TAP ಅನುಮೋದನೆ ದೊರೆತಿರುವ ಹಾಗೂ ಖನಿಜಾನ್ವೇಷಣೆ ವಿಭಾಗವನ್ನು ಬಲಪಡಿಸಲು ಅಗತ್ಯವಿರುವ ಉಪಕರಣ ಮತ್ತು ತಂತ್ರಾಂಶಗಳ ಮುಂದುವರೆದ ಖರೀದಿ. (Arc GIS, Handheld DGPS, Video wall, Computer and peripherals, LCD projector & Geological Instruments) ([illegible] ವಿವರ ಪ್ರಸ್ತಾವನೆ). | 70.00 |
| | | 3) ಖನಿಜಾನ್ವೇಷಣೆಯ ಕ್ಷೇತ್ರ ಕಾರ್ಯದಲ್ಲಿ ಸಂಗ್ರಹಿಸಲಾದ ಖನಿಜ ಮಾದರಿಗಳಲ್ಲಿ ವಿವಿಧ ಖನಿಜಗಳನ್ನು ಗುರುತಿಸಲು ಹಾಗೂ ಅದರ ಗುಣಮಟ್ಟವನ್ನು ಪರಿಶೀಲಿಸಲು ಅಗತ್ಯವಿರುವ ಕೇಂದ್ರ ಕಛೇರಿಯ ರಸಾಯನಿಕ ಪ್ರಯೋಗಶಾಲೆಯ ಹಾಗೂ ಲೋಹಶಾಸ್ತ್ರ ಪ್ರಯೋಗಶಾಲೆಗಳ ನವೀಕರಣ ಕಾಮಗಾರಿಗಳು ಮತ್ತು ಆಧುನಿಕ ಉಪಕರಣಗಳು ಸೇರಿದಂತೆ ಇತರೆ ಪರಿಕರಗಳ ಖರೀದಿ, ವಾರ್ಷಿಕ ನಿರ್ವಹಣೆ ಇತ್ಯಾದಿ ವೆಚ್ಚ. | 550.00 |
| | | 4) ಕೇಂದ್ರ ಕಛೇರಿಯ ಖನಿಜಾನ್ವೇಷಣೆ ವಿಭಾಗಕ್ಕೆ ಅವಶ್ಯವಿರುವ ಮೂಲಸೌಕರ್ಯ ಸೌಲಭ್ಯಗಳಾದ ಉಪಕರಣಗಳು, ತಂತ್ರಾಂಶಗಳು, ವಾಹನಗಳು, ಗಣಕಯಂತ್ರಗಳು, ಇತ್ಯಾದಿ ಖರೀದಿ ಹಾಗೂ ಅವುಗಳ ನಿರ್ವಹಣೆ ವೆಚ್ಚ. | 92.00 |
| | | 5) ಖನಿಜಾನ್ವೇಷಣೆ ಕಾರ್ಯಕ್ಕಾಗಿ ಅಗತ್ಯವಿರುವ ತಾಂತ್ರಿಕ ಸಮಾಲೋಚಕರು-1, ಭೂಭೌತವಿಜ್ಞಾನಿ-1, GIS analyst-2, ಲೋಹಶಾಸ್ತ್ರಜ್ಞರು-4, ರಸಾಯನ ತಜ್ಞರು-04, ಪ್ರಯೋಗಶಾಲೆಯ ಸಹಾಯಕರು-5, ಡೇಟಾ ಎಂಟ್ರಿ ಆಪರೇಟರ್-3, ಡಿ ಗುಂಪು ನೌಕರರು-3, ವಾಹನ ಚಾಲಕರು-8 ಸಿಬ್ಬಂದಿಗಳ ಹೊರಗುತ್ತಿಗೆ ನೇಮಕಾತಿಗೆ ತಗಲುವ ವೇತನ ವೆಚ್ಚ ಹಾಗೂ ಖನಿಜಾನ್ವೇಷಣೆಯ ಕ್ಷೇತ್ರ ಕಾರ್ಯದ ಸಮಯದಲ್ಲಿ ಪ್ರತಿ ತಂಡಕ್ಕೆ ಇಬ್ಬರಂತೆ ದಿನಭತ್ಯೆ ಆಧಾರದಲ್ಲಿ ನೇಮಿಸಿಕೊಳ್ಳುವ ಕ್ಷೇತ್ರ ಸಹಾಯಕರ ವೆಚ್ಚ, ಪ್ರಾಸಂಗಿಕ ವೆಚ್ಚಗಳು (Incidental charges). ಖನಿಜಾನ್ವೇಷಣೆ ವಿಭಾಗದ ಸಿಬ್ಬಂದಿಗಳು ಕೈಗೊಳ್ಳುವ ಕ್ಷೇತ್ರ ಕಾರ್ಯಕ್ಕೆ ಪಾವತಿಸಬೇಕಾದ ವಿಶೇಷ ಭತ್ಯೆ ವೆಚ್ಚ ಸೇರಿದಂತೆ ಇತರೆ ವೆಚ್ಚಗಳು. ವಿವಿಧ ಖನಿಜಾನ್ವೇಷಣೆ ಸಂಸ್ಥೆಗಳಿಂದ ತರಬೇತಿಯ ವೆಚ್ಚ, ಸೇವಾ ಶುಲ್ಕ ಹಾಗೂ ಇತರೆ ವೆಚ್ಚಗಳು. | 123.00 |

| | | | |
|---|---|---|---|
| | | 6) ಈಗಾಗಲೇ ರಾಜ್ಯದ ಕೆಲವು ಜಿಲ್ಲೆಗಳ ಕಲ್ಲು ಗಣಿಗುತ್ತಿಗೆ ಪ್ರದೇಶಗಳಲ್ಲಿ ಟೆಂಡರ್ ಕಂ ಕೊಟೇಶನ್ ಮೂಲಕ ಡ್ರೋಣ್ ಉಪಕರಣ ಬಳಸಿ ಸರ್ವೆ ಕಾರ್ಯ ಕೈಗೊಳ್ಳಲಾಗಿರುವ ಹಾಗೂ ಮುಂದೆ ಕೈಗೊಳ್ಳುವ ಸರ್ವೆ ಕಾರ್ಯಗಳ ವೆಚ್ಚ. ಗಣಿಗುತ್ತಿಗೆಗಳಲ್ಲಿ ಹೊರ ತೆಗೆಯಲಾದ ಖನಿಜ ಪ್ರಮಾಣವನ್ನು ಗುರುತುಪಡಿಸಲು 2 survey grade ಡ್ರೋಣ್ ಉಪಕರಣ ಖರೀದಿ. | 450.00 |
| | | 7) ಕಟ್ಟಡಗಳನ್ನು ತೆರವುಗೊಳಿಸಿದಾಗ ಉತ್ಪತ್ತಿಯಾಗುವ ಮರಳು ಮತ್ತು ಇತರೆ ಖನಿಜಗಳನ್ನು ಬೇರ್ಪಡಿಸಿ ಪುನರ್ಬಳಕೆ ಮಾಡಲು Hubli-Dharwad ಮಹಾನಗರ ಪಾಲಿಕೆಯ ಸಹಭಾಗಿತ್ವದಲ್ಲಿ ಘನ ತ್ಯಾಜ್ಯ ವಿಲೇವಾರಿ ಉಪ ಖನಿಜಗಳ ಮರುಬಳಕೆ ಘಟಕಗಳ ಸ್ಥಾಪನೆ (ಸ್ಪಿಲ್ ಓವರ್ ಪ್ರಸ್ತಾವನೆ). | 50.00 |
| | | 8) ರಾಜ್ಯದಲ್ಲಿ ಮೊಬೈಲ್ ಪರೀಕ್ಷಾ ಪ್ರಯೋಗಶಾಲೆ ಸ್ಥಾಪಿಸಲು ಈಗಾಗಲೇ ಖರೀದಿಸಿರುವ ಎರಡು ವಾಹನಗಳಿಗೆ ಎಂ-ಸ್ಯಾಂಡ್ ವಿಶ್ಲೇಷಣೆ ಕೈಗೊಳ್ಳಲು ಅಗತ್ಯವಿರುವ ವಿನ್ಯಾಸಕ್ಕೆ ಅನುಗುಣವಾಗಿ ವಾಹನಗಳಿಗೆ ಕವಚ ನಿರ್ಮಾಣ, ವಿಶ್ಲೇಷಣೆ ಉಪಕರಣ ಖರೀದಿ ಹಾಗೂ ಚಾಲಕ / ಸಿಬ್ಬಂದಿಗಳ ವೆಚ್ಚ. | 20.00 |
| | | 9) ಮುಖ್ಯ ಹಾಗೂ ಉಪ ಖನಿಜಗಳ ಕಲ್ಲು ಗಣಿಗುತ್ತಿಗೆಗಳನ್ನು ಸಂಪೂರ್ಣವಾಗಿ Digital Library ಯಾಗಿ ಅನುಷ್ಠಾನಗೊಳಿಸಲು ಅಗತ್ಯವಿರುವ ಸಾಫ್ಟ್ ವೇರ್, ಗಣಕಯಂತ್ರ, ಸರ್ವರ್, ಮಾನವ ಸಂಪನ್ಮೂಲ, ನಿರ್ವಹಣೆ ಮತ್ತು ಇತರೆ ವೆಚ್ಚ ಅಥವಾ ಸಂಪೂರ್ಣ ಯೋಜನೆಯನ್ನು ನುರಿತ ಸಂಸ್ಥೆಗಳಿಂದ ಅನುಷ್ಠಾನಗೊಳಿಸಲು ತಗಲುವ ವೆಚ್ಚ. | 30.00 |
| | | 10) ವಸ್ತು ಪ್ರದರ್ಶನದಲ್ಲಿ ಇಲಾಖಾ ವತಿಯಿಂದ ಮಳಿಗೆ ಇಟ್ಟು ಖನಿಜ ಸಂಪನ್ಮೂಲ, ಖನಿಜ ಮಾದರಿ, ಅಲಂಕಾರಿಕ ಶಿಲಾ ಮಾದರಿಗಳ ಪ್ರದರ್ಶನಕ್ಕಾಗಿ ಹಾಗೂ ಅಂತರರಾಷ್ಟ್ರೀಯ ಸ್ಟೋನಾ / ಫಿಮಿ ಮತ್ತು ಇತರೆ ವಸ್ತು ಪ್ರದರ್ಶನ ಹಾಗೂ ವಸ್ತು ಸಂಗ್ರಹಾಲಯಕ್ಕೆ ಖನಿಜ ಮಾದರಿಗಳ ಖರೀದಿ ಹಾಗೂ ಕೇಂದ್ರ ಕಛೇರಿ ಮತ್ತು ವಿವಿಧ ಜಿಲ್ಲೆಗಳಲ್ಲಿ ವಸ್ತು ಸಂಗ್ರಹಾಲಯಕ್ಕಾಗಿ ಖನಿಜ ಮಾದರಿಗಳನ್ನು ಖರೀದಿಸುವುದು ಹಾಗೂ ಚಾಮರಾಜನಗರ ಜಿಲ್ಲೆಯ ಗಾಳಿಪುರ ಗ್ರಾಮದಲ್ಲಿ Natural Geological Museum ಸ್ಥಾಪಿಸಲು. | 80.00 |
| | | 11) ದೇಶದಾದ್ಯಂತ ಹಮ್ಮಿಕೊಂಡಿರುವ ಭೂವೈಜ್ಞಾನಿಕ ಅಧ್ಯಯನ ಹಾಗೂ ಹೊಸ ಭೂವೈಜ್ಞಾನಿಕ ಕಾರ್ಯಕ್ರಮಗಳನ್ನು ರೂಪಿಸಲು, ಪ್ರಗತಿ ಪರಿಶೀಲನೆ ಕೈಗೊಳ್ಳಲು ಹಮ್ಮಿಕೊಳ್ಳುವ ಎಸ್.ಜಿ.ಪಿ.ಬಿ ಸಭೆ ಮತ್ತು ಎಸ್.ಜಿ.ಪಿ.ಬಿ ಉಪ ಸಮಿತಿ ಸಭೆ ಹಾಗೂ ಇತರೆ ಸಭೆಗಳಿಗೆ ಹಾಜರಾಗುವ ಅಧಿಕಾರಿ / ಅಧಿಕಾರೇತರ ಸದಸ್ಯರ ಉಪಸ್ಥಿತಿ ಭತ್ಯೆ ಹಾಗೂ ಇಲಾಖೆಯಲ್ಲಿ ನಡೆಯುವ ವಿವಿಧ ಸಭೆಗಳ ವೆಚ್ಚ. | 8.00 |
| | | 14) ಭೂವಿಜ್ಞಾನ ಮತ್ತು ಗಣಿಗಾರಿಕೆ ಕುರಿತು ಇಲಾಖೆ ಹಾಗೂ ಜಿ.ಎಸ್.ಐ, ಭಾರತೀಯ ಗಣಿ ಬ್ಯೂರೋ, ವಿಶ್ವವಿದ್ಯಾನಿಲಯಗಳು ಮತ್ತು ಇತರೆ ಭೂವಿಜ್ಞಾನ ಸಂಬಂಧಿತ ಹೆಸರಾಂತ ಸಂಘ-ಸಂಸ್ಥೆಗಳು ನಡೆಸುವ ಸಮಾವೇಶ ಹಾಗೂ ಕಾರ್ಯಾಗಾರಗಳಿಗೆ ಪ್ರಾಯೋಜಕತ್ವ ನೀಡುವುದು. | 2.00 |
| | | ಒಟ್ಟು | 4000.00 |

| ಕ್ರ. ಸಂ. | ಯೋಜನೆ ಮತ್ತು ಲೆಕ್ಕ ಶೀರ್ಷಿಕೆ ಸಂಖ್ಯೆ | ಕಾರ್ಯಕ್ರಮಗಳು | ಅಂದಾಜಿಸಲಾದ ಅನುದಾನ |
|---|---|---|---|
| 3 | ಕಲ್ಲು ಗಣಿಗುತ್ತಿಗೆ ಪ್ರದೇಶದಲ್ಲಿ ಗುಂಡಿ ಮುಚ್ಚುವುದು (2853-02-102-0-17) | ನಿಷ್ಕ್ರಿಯೆಗೊಂಡಿರುವ / ರದ್ದು ಪಡಿಸಲಾದ ಕಲ್ಲು ಗಣಿ ಗುಂಡಿಗಳ ಸುತ್ತಲೂ ಸುರಕ್ಷಿತ ಕ್ರಮಕ್ಕಾಗಿ ತಡೆಗೋಡೆ ನಿರ್ಮಿಸುವುದು ಹಾಗೂ ಅಭಿವೃದ್ಧಿ ಪಡಿಸುವುದು. | 200.00 |
| | | ಒಟ್ಟು | 200.00 |

| ಕ್ರ. ಸಂ. | ಯೋಜನೆ ಮತ್ತು ಲೆಕ್ಕ ಶೀರ್ಷಿಕೆ ಸಂಖ್ಯೆ | ಕಾರ್ಯಕ್ರಮಗಳು | ಅಂದಾಜಿಸಲಾದ ಅನುದಾನ |
|---|---|---|---|
| 4 | ಆಧುನೀಕರಣ (2853-02-001-0-01) | 1) ಕೇಂದ್ರ ಕಛೇರಿ ಹಾಗೂ ಜಿಲ್ಲಾ ಕಛೇರಿಗಳನ್ನು ಇ-ಕಛೇರಿಯನ್ನಾಗಿ ಪರಿವರ್ತಿಸುವ ಸಂಬಂಧ ನವೀಕರಣ ಕಾಮಗಾರಿ/ ಗಣಕಯಂತ್ರ ಖರೀದಿ/ ಸಾಫ್ಟ್ ವೇರ್ ಹಾಗೂ ಹಾರ್ಡ್ ವೇರ್ ಖರೀದಿ. | 20.00 |
| | | 2) ಇಲಾಖೆಗೆ ಒಳಪಡುವ ರಸಾಯನ ಶಾಸ್ತ್ರ ಮತ್ತು ಲೋಹಶಾಸ್ತ್ರ ಪ್ರಯೋಗಶಾಲೆಗಳ ನವೀಕರಣ ಕಾಮಗಾರಿ ಮತ್ತು ಉಪಕರಣಗಳ ಖರೀದಿ ವೆಚ್ಚ. | 70.00 |
| | | 3) ರಸಾಯನಶಾಸ್ತ್ರ ಪ್ರಯೋಗಶಾಲೆಯಲ್ಲಿರುವ ಉಪಕರಣಗಳ ವಾರ್ಷಿಕ ನಿರ್ವಹಣೆ ಹಾಗೂ ರಾಸಾಯನಿಕಗಳ ಖರೀದಿ/ ಇಲಾಖೆಗೆ ಸಂಬಂಧಿಸಿದ ಇತರೆ ಪರಿಕರ/ ಉಪಕರಣಗಳು. | 20.00 |
| | | 4) ರಾಜ್ಯಾದ್ಯಂತ ಅವಶ್ಯಕವಿರುವ ಮರಳು ಹಾಗೂ ಖನಿಜ ಪರವಾನಿಗೆ (SSP Tripsheets) ಮುದ್ರಣ, ಸರಬರಾಜು ಹಾಗೂ ಜಾಹೀರಾತಿಗಾಗಿ. | 150.00 |

| | | | |
|---|---|---|---|
| | ಉಪ ಶೀರ್ಷಿಕೆ-125 | 5) ಇಲಾಖೆಯ ಸಮಗ್ರ ಗಣಿಗುತ್ತಿಗೆ ನಿರ್ವಹಣಾ ವ್ಯವಸ್ಥೆಯ (ILMS) ಹೋಸ್ಟಿಂಗ್ ಚಾರ್ಜಸ್, MITS ವೆಚ್ಚ ಮತ್ತು ವಾರ್ಷಿಕ ನಿರ್ವಹಣಾ ವೆಚ್ಚ. | 35.00 |
| | | 6) ಕೇಂದ್ರ ಕಛೇರಿ ಕಡತಗಳನ್ನು ಗಣಕೀಕೃತಗೊಳಿಸುವುದು ಹಾಗೂ ಗಣಿಗುತ್ತಿಗೆ ಪುಸ್ತಕಗಳ ಗಣಕೀಕರಣ. | 5.00 |
| | | 7) ಧಾರವಾಡ, ಶಿವಮೊಗ್ಗ, ರಾಮನಗರ, ಚಿಕ್ಕಮಗಳೂರು, ಬೆಳಗಾವಿ, ಕಲಬುರಗಿ, ಉಡುಪಿ, ಬೀದರ್ ಹಾಗೂ ಕಟ್ಟಡ ನಿರ್ಮಾಣವು ಅಂತಿಮ ಹಂತದಲ್ಲಿರುವ ಇತರೆ ಜಿಲ್ಲಾ ಕಛೇರಿಗಳಿಗೆ ಅಗತ್ಯಕ್ಕೆ ಅನುಗುಣವಾಗಿ ಒಳವಿನ್ಯಾಸ ಕಾಮಗಾರಿ, work station ಪೀಠೋಪಕರಣ ಒದಗಿಸುವ ವೆಚ್ಚ ಹಾಗೂ ಕೇಂದ್ರ ಕಛೇರಿಯಲ್ಲಿನ ನವೀಕರಣ,ಮೂಲಭೂತಸೌಕರ್ಯ ಮತ್ತು ಪೀಠೋಪಕರಣ, ಇತ್ಯಾದಿ ಒದಗಿಸುವ ವೆಚ್ಚ. | 80.00 |
| | | 8) ಎಂ.ಇ.ಸಿ.ಎಲ್ ಸೇರಿದಂತೆ ವಿವಿಧ ಸಂಸ್ಥೆಗಳಿಂದ ಕೈಗೊಂಡಿರುವ ಖನಿಜಾನ್ವೇಷಣೆಯ ದಿಂಡು ಛ್ಯರಿಗೆ (core drilling) ಮಾದರಿಗಳನ್ನು ಸಂಗ್ರಹಿಸಿಡಲು ಬೆಂಗಳೂರಿನಲ್ಲಿ ಇಲಾಖೆಗೆ ಹಂಚಿಕೆಯಾಗಿರುವ ನಿವೇಶನದಲ್ಲಿ ಕೋರ್ ಲಾಗ್ ಸಂಗ್ರಹಾಲಯ ಸ್ಥಾಪಿಸುವ ವೆಚ್ಚ. | 37.00 |
| | | 9) ಭಾರತೀಯ ದೈವಜ್ಞ ಮೀಡಿಯಾ ರಿಲೇಷನ್ಸ್, ಬೆಂಗಳೂರು ವತಿಯಿಂದ ಇಲಾಖೆಗೆ ಸಂಬಂಧಿಸಿದಂತೆ ಸಾಕ್ಷ್ಯ ಚಿತ್ರವನ್ನು ಚಿತ್ರೀಕರಿಸುವ ಸಂಬಂಧ (ಸ್ಪಿಲ್ ಓವರ್ ಪ್ರಸ್ತಾವನೆ) ಹಾಗೂ ಇತರೆ ಕಾರ್ಯಕ್ರಮಗಳ ವೆಚ್ಚ. | 3.00 |
| | | 10) ಕೇಂದ್ರೀಕೃತ ಗಣಿ ಚಟುವಟಿಕೆ ನಿಯಂತ್ರಣ ಕೋಶ ಸ್ಥಾಪಿಸಿ ಖನಿಜ ಗಣಿಗಾರಿಕೆ ಹಾಗೂ ಸಾಗಾಣಿಕೆ ಮಾರ್ಗವನ್ನು ಖಚಿತ ಪಡಿಸಿಕೊಳ್ಳಲು ವಾಹನಗಳಿಗೆ GPS ಗಳನ್ನು ಅಳವಡಿಸಿ ಹಾಗೂ GPS tracking ಮೂಲಕ ಗಣಿ ಪ್ರದೇಶದಿಂದ ತನಿಖಾ ಠಾಣೆ, ವೆರಿಫಿಕೇಶನ್ ಘಟಕ, ಡೆಸ್ಟಿನೇಶನ್ ಸ್ಥಳವನ್ನು ಏಕೀಕರಣಗೊಳಿಸಿ ಅನಧಿಕೃತ ಗಣಿ ಚಟುವಟಿಕೆಯನ್ನು ನಿಯಂತ್ರಿಸುವ ಏಕೀಕೃತ ದತ್ತಾಂಶ ವ್ಯವಸ್ಥೆ ಕಲ್ಪಿಸುವ One State One GPS ಯೋಜನೆಯ ವೆಚ್ಚ. | 40.00 |
| | | 11) ಗಣಿ / ಕಲ್ಲು ಗಣಿಗುತ್ತಿಗೆ ಮತ್ತು ಕ್ರಷರ್ ಲೈಸೆನ್ಸ್ ಕೋರಿ ಸಲ್ಲಿಸುವ ಅರ್ಜಿಗಳನ್ನು ನಿಗದಿತ ಸಮಯದೊಳಗಾಗಿ ವಿಲೇವಾರಿ ಮಾಡಲು ಏಕಗವಾಕ್ಷಿ ವ್ಯವಸ್ಥೆ ಜಾರಿಗೊಳಿಸಲು ಮತ್ತು ಲೈಸೆನ್ಸ್ ಸಂಬಂಧಿತ ಕುಂದುಕೊರತೆಗಳನ್ನು ಶೀಘ್ರವಾಗಿ ಬಗೆಹರಿಸಲು ರಾಜ್ಯದ ನಾಲ್ಕು ಕಂದಾಯ ವಿಭಾಗಗಳಲ್ಲಿ ಗಣಿ ಅದಾಲತ್ ಗಳನ್ನು ಆಯೋಜಿಸಲು ಮತ್ತು ಅವಶ್ಯ ತಂತ್ರಾಂಶಗಳನ್ನು ರೂಪಿಸಲು ತಗಲುವ ವೆಚ್ಚ. | 40.00 |
| | | ಒಟ್ಟು | 500.00 |

| ಕ್ರ. ಸಂ. | ಯೋಜನೆ ಮತ್ತು ಲೆಕ್ಕ ಶೀರ್ಷಿಕೆ ಸಂಖ್ಯೆ | ಕಾರ್ಯಕ್ರಮ | ಅಂದಾಜಿಸಲಾದ ಅನುದಾನ |
|---|---|---|---|
| 5 | ಬಂಡವಾಳ ವೆಚ್ಚ<br>ಕಛೇರಿ ಕಟ್ಟಡಗಳ ನಿರ್ಮಾಣ<br>(4852-01-800-0-01) | 1) ಮಂಡ್ಯ, ಧಾರವಾಡ, ಶಿವಮೊಗ್ಗ, ಗದಗ, ಮೈಸೂರು, ರಾಮನಗರ, ಕಲಬುರಗಿ, ಬೀದರ್, ಚಿಕ್ಕಮಗಳೂರು, ಉಡುಪಿ, ಹೊಸಪೇಟೆ ಜಿಲ್ಲೆಗಳಲ್ಲಿ ಸ್ವಂತ ಕಛೇರಿ ಕಟ್ಟಡಗಳ ಮುಂದುವರೆದ ನಿರ್ಮಾಣ ಕಾಮಗಾರಿಗಳ ಬಿಲ್ ಪಾವತಿ ವೆಚ್ಚ(ಸ್ಪಿಲ್ ಓವರ್ ಪ್ರಸ್ತಾವನೆ) ಹಾಗೂ ಈ ವಿಷಯವಾಗಿ ಸರ್ಕಾರ ಮತ್ತು ಅನುಷ್ಠಾನ ಏಜೆನ್ಸಿಗಳ ಸಹಮತಿಯ ಮೇರೆಗೆ ಪಾವತಿಸಬೇಕಾದ ಯಾವುದೇ ಇತರೆ ವೆಚ್ಚಗಳು. | 410.00 |
| | | 2) ಈಗಾಗಲೇ ಇಲಾಖೆಯು ಭೂಸ್ವಾಧೀನ ಮತ್ತು ಇತರೆ ರೀತಿಯಲ್ಲಿ ಖರೀದಿಸಿರುವ ನಿವೇಶನಗಳ ಸಂಬಂಧ ಯಾವುದೇ ಸಕ್ಷಮ ಪ್ರಾಧಿಕಾರಗಳು/ ನ್ಯಾಯಾಲಯಗಳು ಹೊರಡಿಸುವ ಆದೇಶಗಳಂತೆ ಕಾಲಕಾಲಕ್ಕೆ ಮಾಡಬೇಕಾದ ಹೆಚ್ಚುವರಿ ಪಾವತಿಗಳ ವೆಚ್ಚ. | 20.00 |
| | | ಒಟ್ಟು | 430.00 |
| | | ಕ್ರಮ ಸಂಖ್ಯೆ-1-ರಿಂದ 5 ರವರೆಗೆ ಒಟ್ಟು ಮೊತ್ತ | 5155.00 |

(ಸುಮ ಎಸ್)

ಸರ್ಕಾರದ ಅಧೀನ ಕಾರ್ಯದರ್ಶಿ(ಗಣಿ-1)

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ.